ಅನಿಸುತಿತ್ತು. ಅಷ್ಟೇ ಅಲ್ಲ ಪ್ರಾಣೇಶನ ಮುಖವೂ ಮಸುಕಾಗಿ ಮರತೇಹೋಗಿದೆ. ಒಮ್ಮೆ ಟ್ರಂಕಿನೊಳಗಿನ ಪಾಸ್‌ಪೋರ್ಟ್ ಸೈಜಿನ ಬ್ಲಾಕ್ ಅಂಡ್ ವೈಟ್‌ನಲ್ಲಿರುವ ಮದುವಿಫೋಟೊ ತೆಗೆದು ನೋಡಬೇಕು ಅನಸ್ತಿತ್ತು. ಅದ್ಯಾಕೋ ಅಂಜಿಕೆ ಆಗಿ ಏನೇನೋ ವಿಚಾರಗಳು ದಾಳಿಮಾಡ್ತಿದ್ದವು. ಒಂದುವೇಳೆ ಅವರು ಸತ್ತಿದ್ರ?... ನಾನು ಏನು ಮಾಡಬೇಕು? ಶುಭ ಕಾರ್ಯಕ್ರಮಗಳ ಅಡಿಗೆಗೆ ಹೋಗಲಿಕ್ಕಾಗದಿಲ್ಲ. ಇಲ್ಲದ ಕಂಡೀಶನ್‌ಗಳು. ಹೋಗದಿದ್ದರೆ?... ಬಾಯಿ ತೆರೆದುಕೊಂಡು ಕೂತ ಈ ಮಕ್ಕಳ ಹೊಟ್ಟೆಗಳನ್ನು ಹೆಂಗ ಮುಚ್ಚಬೇಕು ಎಂಬೆಲ್ಲ ಲೆಕ್ಕಾಚಾರಗಳನ್ನು ತಲೆದಿಂಬಾಗಿಸಿಕೊಂಡು ರಾತ್ರಿಗಳನ್ನು ಕಳಿತಿದ್ದಳು. ಒಬ್ಬಳೆ ಇದ್ದಾಗ ಇಂತಹ ಯೋಚನೆಗಳಿಂದ ಅಧೀರಳಾಗಿ ರಾತ್ರಿ ನಿದ್ದಿ ಇಲ್ಲದ ಕಣ್ಣುಗಳು ಮುಂಜಾನೆ ಹೊತ್ತಿಗೆ ಉಸುಕು ತುಂಬಿಕೊಂಡಂಗಾಗುತ್ತಿದ್ದವು.

ಆದರೂ ಆಕೆ ಗಟ್ಟಿಗಿತ್ತಿಯೇ ಹೌದು. ಭಕ್ರಿಮನಿಗಳಲ್ಲಿ ತನ್ನ ಪಗಾರು ಹೆಚ್ಚು ಮಾಡ್ರಿ ಅಂತಾಗಲಿ, ಮುಂಗಡ ಹಣ ಕೇಳುವಾಗಲಾಗಲಿ, ''ನೋಡ್ರಿ ವೈನಿ, ನಾ ಗಂಡಾ ಮಕ್ಕಳೊಂದಿಗಿತ್ತಿ. ನಾ ಎಲ್ಲೂ ಓಡಿಹೋಗಂಗಿಲ್ಲ. ಏನೋ ಕಷ್ಟಕಾಲ ಬಂದಾಗ ಕೇಳತ್ತೀನಿ. ನಾ ಕೊಟ್ಟು ಮುಟ್ಟಸಲಿಕ್ಕರೇನಾಯ್ತು, ನಮ್ಮನಿಯರು ಖಂಬೀರದಂಗ ಹಾರ. ಅವರು ದುಡದು ನಿಮ್ಮ ರೊಕ್ಕ ಕೊಡ್ತಾರ'' ಅಂತಿದ್ದಳು. ಆದರ ಈಗ ಅದೇ ಪ್ರಸಂಗಕ್ಕ, ''ನೋಡ್ರಿ ವೈನಿ... ನಾ ಗಂಡ ದಿಕ್ಕಿಲ್ಲದಾಕಿ. ಮಕ್ಕಳ ಮಾರಿ ನೋಡಿ ಬದಕಿದ್ದೀನಿ. ನನ್ನ ಗಂಡ ಮಾಡಿದ ಸಾಲಾನೇ ಮುಟ್ಟಿಸಿ ಮಾತು ಉಳಿಸಿಕೊಂಡಾಕಿ... ನಾ ಮಾಡಿದ ಸಾಲ ಮುಳಗಿಸಿ ಮಾತು ತಪ್ಪೊ ಹೆಂಗಸಲ್ಲರಿ ನಾ... ನೋಡ್ರಿ... ಭರವಸಾ ಇದ್ರ ಸಹಾಯ ಮಾಡ್ರಿ... ಇಲ್ಲಂದ್ರ ಬಿಡ್ರಿ...'' ಎಂದು ಪ್ರಾಣೇಶನ ಇರುವನ್ನು, ಇಲ್ಲದಿರುವಿಕೆಯನ್ನು ತನ್ನ ಮಾತುಗಾರಿಕೆಯಿಂದ 'ಬಳಸಿಕೊಂಡಳು ಅದಕೂ ಇದಕು ಎದಕೂ...' ಅನೇಕರು ಸುನಂದಾಗೆ ನಿನ್ನ ಗಂಡ ಎಲ್ಲಿದ್ದಾನೆ ಎಂದು ಸಹಜವಾಗಿ ಕೇಳಿದವರಿಗೆ ಯಾವ ಸಂಕೋಚವೂ ಇಲ್ಲದೆ, ''ಎಲ್ಲಿ ಹಾಳಾಗಿ ಹೋಗ್ಯಾನೊ. ನೆಟ್ಟಗ ಸಂಸಾರ ಮಾಡಲಾರದೆ ಹೆಂಡ್ತಿ ಮಕ್ಕಳನ್ನು ಸಾಕಲಾರದೆ ಪುಕ್ಕಲ'' ಎಂದು ಒದರಿಕೊಂಡು ಬಿಡುತ್ತಿದ್ದಳು. ಅಕಸ್ಮಾತ್ತಾಗಿ ಅವಳನ್ನೆ ಕೆಣಕಲು ಈ ಪ್ರಶ್ನೆ ಕೇಳಿದರೆ, ''ಯಾಕ?... ನನ್ನ ಗಂಡನ ಉಸಾಬರಿ ನಿಮಗ್ಯಾಕ. ಅಂವ ಎಲ್ಯಾಕ ಇರಲ್ಯಾಕ... ಅದರ ಚಿಂತಿ ಮಾಡಲಿಕ್ಕಿ ನಾ ಇದ್ದೀನಿ. ಊರ ಚಿಂತಿ ಮಾಡಿ ಮುಲ್ಲಾ ಬಡುವಾಗಿದ್ನಂತ. ನಿಮ್ಮದ ನೋಡಕೋರಿ. ಮಂದಿ ಪಂಚೇತಿ ಮಾಡಬ್ಯಾಡ್ರಿ'' ಅಂತ ಗದರಿಸಿಬಿಡುತಿದ್ದಳು.

ದಿನಗಳು ಉರುಳಿದಂತೆ ಸುನಂದಳ ಸಂಸಾರ ದೊಡ್ಡದಾಯ್ತು. ಕೇವಲ ನಾಲ್ಕಾರು ಮನೆಯಲ್ಲಿ ಭಕ್ರಿ ಮಾಡಿ ಬಂದ ಹಣದಿಂದ ಸಂಸಾರ ನಡೆಯದಾಯ್ತು. ಹಾಗಾಗಿ ಮದುವೆ ಮುಂಜಿ, ಗೃಹಪ್ರವೇಶಗಳ ಅಡುಗೆಯನ್ನು ವಹಿಸಿಕೊಂಡಳು. ದೊಡ್ಡ ದೊಡ್ಡ ಕಾರ್ಯಕ್ರಮಗಳ ಉಸ್ತುವಾರಿಗೆ ಸಮ ಸಮವಾಗಿ ಕೈ ಜೋಡಿಸುವ ಅರಿಕೇರಿ ರಮೇಶ ಅವಳಿಗೆ ಬಲಗೈಯಾಗಿದ್ದ ಸುದ್ದಿ ಅನೇಕರಿಗೆ ಹೊಸದೊಂದು ಗ್ರಾಸವಾಗಿತ್ತು. ವಯಸ್ಸಿನೊಳಗ ಸಣ್ಣವನೇ. ಆದರೂ ಇವರಿಬ್ಬರ ಸಲುಗೆ, ನಗೆಚಾಟಿಕೆ ನೋಡಿದವರಿಗೆಲ್ಲ ಮತ್ತೆ ಅವಳ ಗಂಡ ಎಲ್ಲಿ ಎಂಬ ಕುತೂಹಲ ಹೆಚ್ಚಾಗುತಿತ್ತು.

ಅಂತವರ ಕುತುಹಲಕ್ಕ ಬುದ್ಧಿ ಹೇಳಬೇಕೆಂದೆ ತನ್ನ ಜೊತೆ ಪೂರಿ ಲಟ್ಟಿಸಲೆಂದು ಬರುವ ಅಂಬಿಕಾಳ ಮುಂದೆ, ''ನಿನ್ನೆ ನಮ್ಮನಿಯವರು ಬಂದಿದ್ದರು. ಹಿಂಗಾಗಿ ನಿತ್ಯದ ಭಕ್ರಿ ಮನಿಗಳಿಗಿ ಹೋಗದಾಗಲಿಲ್ಲ ನೋಡು'' ಎಂದು ಸುಲಾ ಸೂಕ್ಷ್ಮವಾಗಿ ಆಗಾಗ ತನ್ನ ಗಂಡ ಮನಿಗಿ ಬರ್ತಾನ ಅಂತ ಸುಳಿವು ಕೊಡುತಿದ್ದಳು. ಆದರೂ ಅವರವರಲ್ಲಿ ಮಾತು ಚರ್ಚೆ ನಡೆದು ಇದು ಸುಳ್ಳು ಸುದ್ದಿ ಅಂತ ನಿರ್ಣಯವಾಗುತಿತ್ತು.

ಇಂತಹ ತನಿಖೆ, ತಕರಾರುಗಳ ನಡುವೆಯೂ ಸುನಂದಾಬಾಯಿ ಕುಶಾಲಿ ಸ್ವಭಾವದವಳು. ದೊಡ್ಡ ದೊಡ್ಡ ಸಮಾರಂಭದ ಅಡುಗೆಗೆ ಇಕಿ ಹೋದ್ರ ಜೊತಿಗಿದ್ದವರಿಗಿ ಕೆಲಸದ ಆಯಾಸನೇ